**ಇಂದು ದಿನಾಂಕ 24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಆರೋಗ್ಯ ಸಮಸ್ಯೆಯಿಂದ ನನ್ನ ತಂದೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ, ಆದ್ದರಿಂದ ನಾನು ಅವರ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ಆರೋಗ್ಯ ಸಮಸ್ಯೆಯ ಕುರಿತು ದಾಖಲೆ ಸಲ್ಲಿಸಿಲ್ಲ.

2. ಕೆಂಚಪ್ಪ ಎನ್ನುವರು ನನ್ನ ತಾತ. ಸದರಿಯವರೇ ಮನೆತವನ್ನು ನಡೆಸುವ ಹಿರಿಯನಾಗಿದ್ದ ಎಂದರೆ ನಿಜ. ಸದರಿಯವರು ತೀರಿಕೊಂಡು ಅಂದಾಜು 60 ವರ್ಷ ಆಗಿರಬಹುದು. ಕೆಂಚಪ್ಪ ತೀರಿ ಹೋದ ನಂತರ ಅವರ ಹಿರಿಯ ಮಗ ಚೌಡಪ್ಪ ಮನೆತನದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ನನ್ನ ಅಜ್ಜಿ ನೋಡಿಕೊಳ್ಳುತ್ತಿದ್ದರು. ನನ್ನ ಅಜ್ಜಿ 2005 ನೇ ಇಸವಿಯಲ್ಲಿ ತೀರಿ ಹೋದರು ಎಂದರೆ ನಿಜ. ನಂತರ ನನ್ನ ತಂದೆ ರಾಜಣ್ಣ ಯಜಮಾನನಾಗಿ ಮನೆತನದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮದುವೆಯಾದ ನಂತರ ಅವರ ಕುಟುಂಬದ ಯಜಮಾನತ್ವವನ್ನು ಮತ್ತು ನನ್ನ ದೊಡ್ಡಪ್ಪ ಅವರದೇ ಆದ ಪ್ರತ್ಯೇಕ ಕುಟುಂಬದ ಯಜಮಾನವನ್ನು ಅವರವರೇ ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯ ವಿವಾಹ 1982 ರಲ್ಲಿ ಆಗಿರುತ್ತದೆ.

3. ನಮ್ಮ ಕುಟುಂಬದ ವ್ಯವಹಾರ ಅಂದರೆ ವ್ಯವಸಾಯ, ಹೈನುಗಾರಿಕೆ ಮತ್ತು ಗಣಿಗಾರಿಕೆ ಎಂದರೆ ನಿಜ. ನನ್ನ ದೊಡ್ಡಪ್ಪನಿಗೆ ಮತ್ತು ನನ್ನ ತಂದೆಗೆ ಪ್ರತ್ಯೇಕ ಗಣಿಗಾರಿಕೆ ಪರವಾಣಿಗೆ ಇದ್ದವು ಎಂದರೆ ನಿಜ. ಸದರಿಯವರಿಗೆ ತಿಂಗಳಿಗೆ ತಲಾ 2 ಲಕ್ಷ ರೂಪಾಯಿಗಳ ಆದಾಯವಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತೋಟದಲ್ಲಿ ಸುಗಂಧಿರಾಜ ಹೂವಿನ ಗಿಡಗಳನ್ನು ಬೆಳೆಯುತ್ತಿದ್ದರು ಎಂದರೆ ಸಾಕ್ಷಿದಾರರು ನನ್ನ ತಂದೆ ಬೆಳೆಯುತ್ತಿದ್ದರು ಎನ್ನುತ್ತಾರೆ. ಹೈನುಗಾರಿಕೆಯಿಂದ ನಮಗೆ ಪ್ರತಿದಿನ 600 ರೂಪಾಯಿಗಳ ಆದಾಯವಿತ್ತು ಎಂದರೆ ನಿಜ. ನನ್ನ ತಂದೆಗೆ 3 ಗ್ರಾಮಗಳಲ್ಲಿ ಗಣಿಗಾರಿಕೆ ಮಾಡುವ ಪರವಾಣಿಗೆವಿತ್ತು ಎಂದರೆ ಸಾಕ್ಷಿದಾರರು ಹುರುಳುಗುರ್ಕಿ ಗ್ರಾಮದಲ್ಲಿ ಮಾತ್ರವಿತ್ತು.

4. ನನ್ನ ದೊಡ್ಡಪ್ಪನಿಗೆ 2004 ನೇ ಇಸವಿಯಲ್ಲಿ ರಸ್ತೆ ಅಪಘಾತವಾಯಿತು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ತಂದೆಯೇ ನನ್ನ ದೊಡ್ಡಪ್ಪನ ಮನೆತನವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

5. ದಾವಾ ಸ್ವತ್ತುಗಳಾದ 17 ಸ್ವತ್ತುಗಳಲ್ಲಿ 2 ಸ್ವತ್ತುಗಳನ್ನು ನಾವು ಮಾರಾಟ ಮಾಡಿದ್ದೇವೆ ಎಂದರೆ ನಿಜ. ಸದರಿ ಸ್ವತ್ತುಗಳು ನ್ನನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**